(14)

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯದ 30 ಜಿಲ್ಲೆಗಳಲ್ಲಿ "ವಿಕಲಚೇತನರಿಗೆ ಮಾಹಿತಿ ಸಲಹೆಗಳನ್ನು ನೀಡಲು ವಿಕಲಚೇತನರ ಸಹಾಯವಾಣಿ ಕೇಂದ್ರಗಳನ್ನು" ಪ್ರಾರಂಭಿಸುವ ಬಗ್ಗೆ.

ಓದಲಾಗಿದೆ: ನಿರ್ದೇಶಕರು, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಬೆಂಗಳೂರು ಇವರ ಪತ್ರ ಸಂಖ್ಯೆ:ಇಸಿ/06/ಹೊಸ ಯೋಜನೆ/ವಿ.ಸ.ವಾ/2015-16/428 & 920, ದಿನಾಂಕ: 15-5-2015, 25-5-2015 ಮತ್ತು 19-6-2015

ಪ್ರಸ್ತಾವನೆ:

ರಾಜ್ಯದಲ್ಲಿನ ವಿಕಲಚೇತನರಿಗೆ ಅಗತ್ಯ ಸಲಹೆ, ಮಾರ್ಗದರ್ಶನ ನೀಡಲು 2015-16ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯದ 30 ಜಿಲ್ಲೆಗಳಲ್ಲಿ ವಿಕಲಚೇತನರ ಸಹಾಯವಾಣಿ ಕೇಂದ್ರಗಳನ್ನು ಪ್ರಾರಂಭಿಸುವ ಬಗ್ಗೆ ಘೋಷಿಸಲಾಗಿದೆ. ಆದುದರಿಂದ, ರಾಜ್ಯದ 30 ಜಿಲ್ಲೆಗಳಲ್ಲಿ ವಿಕಲಚೇತನರ ಸಹಾಯವಾಣಿ ಕೇಂದ್ರಗಳನ್ನು ಪ್ರಾರಂಭಿಸಲು ಮತ್ತು ಪ್ರತಿ ಜಿಲ್ಲೆಗೆ ರೂ. 7.15 ಲಕ್ಷಗಳ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2235-2-101-0-99 (ಯೋಜನೆ) ಉಪಲೆಕ್ಕ ಶೀರ್ಷಿಕೆ 051 ಸಾಮಾನ್ಯ ವೆಚ್ಚದಡಿ ಭರಿಸಲು ಆಡಳಿತಾತ್ಮಕ ಮಂಜೂರಾತಿ ನೀಡುವಂತೆ ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರು ಮೇಲೆ ಓದಲಾದ ದಿನಾಂಕ: 15-5-2015, 25-5-2015 ಮತ್ತು 19-6-2015 ರ ಪತ್ರಗಳಲ್ಲಿ ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಮಮಇ 79 ಪಿಹೆಚ್‌ಪಿ 2015, ಬೆಂಗಳೂರು
## ದಿನಾಂಕ: 25-6-2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ, 2015-16ನೇ ಸಾಲಿನಲ್ಲಿ ರಾಜ್ಯದ 30 ಜಿಲ್ಲೆಗಳಲ್ಲಿ ವಿಕಲಚೇತನರ ಸಹಾಯವಾಣಿ ಕೇಂದ್ರಗಳನ್ನು ಪ್ರಾರಂಭಿಸಲು ಮತ್ತು ಈ ಯೋಜನೆಗೆ ಪ್ರತಿ ಜಿಲ್ಲೆಗೆ ರೂ.7.15 ಲಕ್ಷಗಳಂತೆ (ಏಳು ಲಕ್ಷದ ಹದಿನೈದು ಸಾವಿರ ರೂಪಾಯಿಗಳು ಮಾತ್ರ) ವೆಚ್ಚ ಭರಿಸಲು ಅನುಬಂಧದಲ್ಲಿನ ಮಾರ್ಗಸೂಚಿಗಳಿಗೊಳಪಟ್ಟು ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ಈ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2235-02-101-0-99 (ಯೋಜನೆ) ಉಪ ಲೆಕ್ಕ ಶೀರ್ಷಿಕೆ 051 ಸಾಮಾನ್ಯ ವೆಚ್ಚದಡಿ ಒದಗಿಸಿರುವ ಅನುದಾನದಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 579 ವೆಚ್ಚ-3 2015, ದಿನಾಂಕ: 12-6-2015 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

26/05/15

375
26/6/15

(ಜಯಲಕ್ಷ್ಮಿ) 25/6/15
ಸರ್ಕಾರದ ಅಧೀನ ಕಾರ್ಯದರ್ಶಿ-2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಇವರಿಗೆ:

1) ಪ್ರಧಾನ ಮಹಾಲೇಖಪಾಲರು (ಜಿ &ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 1.

..2

2) ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು- 1.
3) ಪ್ರಧಾನ ಮಹಾಲೇಖಪಾಲರು (ಎ&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು- 1.
4) ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
5) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
6) ಜಿಲ್ಲಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
7) ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನ ಸೌಧ, ಬೆಂಗಳೂರು.
8) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
9) ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ನಗರ ಜಿಲ್ಲೆ.
10) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-3), ವಿಧಾನಸೌಧ, ಬೆಂಗಳೂರು.
11) ನಿರ್ದೇಶಕರು, ಪಿಎಂಐ ವಿಭಾಗ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
12) ಜಿಲ್ಲಾ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಅಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.
13) ಶಾಖಾಧಿಕಾರಿ, ಸ್ವೀ.ಮ.ರ ಶಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
14) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿ:

1) ಪ್ರಧಾನ ಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಉಪ ಕಾರ್ಯದರ್ಶಿರವರು, ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಇವರ ಆಪ್ತ ಸಹಾಯಕರು, ಬಹುಮಹಡಿಗಳ ಕಟ್ಟಡ, ಬೆಂಗಳೂರು.

## ಅನುಬಂಧ

### ವಿಕಲಚೇತನರಿಗೆ ಮಾಹಿತಿ ಮತ್ತು ಸಲಹೆಯನ್ನು ನೀಡಲು 30 ಜಿಲ್ಲೆಗಳಲ್ಲಿ "ವಿಕಲಚೇತನರ ಸಹಾಯವಾಣಿ ಸಲಹಾ ಕೇಂದ್ರಗಳನ್ನು" ಪ್ರಾರಂಭಿಸುವ ಯೋಜನೆ

**ಪೀಠಿಕೆ:**

2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಒಟ್ಟು 1324205 ಅಂಗವಿಕಲರಿದ್ದು, ಒಟ್ಟು ಜನಸಂಖ್ಯೆಯ ಶೇಕಡ 2.27 ರಷ್ಟು ಇರುತ್ತಾರೆ. ಇದರಲ್ಲಿ ಅಂದಾಜು ಶೇ.70 ರಷ್ಟು ಗ್ರಾಮೀಣ ಪ್ರದೇಶದವರಾಗಿದ್ದು, ಶೇ.30 ರಷ್ಟು ನಗರ ಪ್ರದೇಶದವರಾಗಿರುತ್ತಾರೆ. ರಾಜ್ಯದಲ್ಲಿ ಅಂಗವಿಕಲರ ಸಬಲೀಕರಣಕ್ಕಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯು ಹಲವಾರು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುತ್ತಿದ್ದು, ಇಲಾಖೆಯ ನಿರ್ದೇಶನಾಲಯವು ಬೆಂಗಳೂರು ನಗರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರತೀ ಜಿಲ್ಲೆಯಲ್ಲಿಯೂ ಇಲಾಖೆಯ ಕಾರ್ಯಕ್ರಮಗಳನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಯ ಮುಖಾಂತರ ನಿರ್ವಹಿಸಲಾಗುತ್ತಿದೆ. ಮುಂದುವರೆದು ಅಂಗವಿಕಲರ ಹಕ್ಕುಗಳ ಸಂರಕ್ಷಣೆ, ಸಮಾಜದಲ್ಲಿ ಇವರ ಪೂರ್ಣ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಅಂಗವಿಕಲ ವ್ಯಕ್ತಿಗಳ ಅಧಿನಿಯಮವನ್ನು ಸಹ ರಾಜ್ಯದಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಈ ಅಧಿನಿಯಮದ ಅನುಷ್ಠಾನದ ಉಸ್ತುವಾರಿಗಾಗಿ ಆಯುಕ್ತರು ಅಂಗವಿಕಲರ ಅಧಿನಿಯಮದ ರಾಜ್ಯ ಮಟ್ಟದ ಕಛೇರಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ. ಅಲ್ಲದೆ ಅಂಗವಿಕಲರಿಗಾಗಿ ರಾಷ್ಟ್ರೀಯ ದತ್ತುನಿಧಿ ಕಾಯ್ದೆ, ಮಾನಸಿಕ ಆರೋಗ್ಯ ಕಾಯ್ದೆಗಳನ್ನು ಅಂಗವಿಕಲ ಅಧಿನಿಯಮ 1995 ಅಂಗವಿಕಲರ ಶ್ರೇಯೋಭಿವೃದ್ಧಿಗಾಗಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳು ಅಂಗವಿಕಲರನ್ನು ಯಶಸ್ವಿಯಾಗಿ ತಲುಪುವಲ್ಲಿ ಅವರಿಗೆ ಸೂಕ್ತ ಸಲಹೆ ಹಾಗೂ ಮಾಹಿತಿಯ ಅವಶ್ಯಕತೆ ಇರುತ್ತದೆ.

ವಿವಿಧ ಇಲಾಖೆಗಳವರು/ಸ್ಥಳೀಯ ಸಂಸ್ಥೆಗಳವರು ಅಂಗವಿಕಲ ಕ್ಷೇಮಾಭೀವೃದ್ಧಿಗಾಗಿ ಆಯಾ ಇಲಾಖೆಯ ಬಡತನ ನಿರ್ಮೂನಾ ಯೋಜನೆಗಳಡಿಯಲ್ಲಿ ಶೇ3%ರಷ್ಟು ಅನುದಾನವನ್ನು ವಿನಿಯೋಗಿಸುತ್ತಿದ್ದು, ಶಾಸಕರ ನಿಧಿಯನ್ನು ಅಂಗವಿಕರ ಅಭಿವೃದ್ಧಿಗಾಗಿ ವಾರ್ಷಿಕ ರೂ.10.00/-ಲಕ್ಷಗಳಷ್ಟು ಅನುದಾನ ನೀಡಲಾಗುತ್ತಿದೆ.

ಹೆಚ್ಚಿನ ಅಂಗವಿಕಲರು ಗ್ರಾಮೀಣ ಪ್ರದೇಶದವರಾಗಿರುವುದರಿಂದ ಸರ್ಕಾರದ ವಿವಿಧ ಇಲಾಖೆಯ ವಿವಿಧ ಕಾರ್ಯಕ್ರಮ/ಯೋಜನೆಗಳಡಿಯಲ್ಲಿ ದೊರೆಯುವ ಸೇವಾ ಸೌಲಭ್ಯಗಳನ್ನು ಹಾಗೂ ಇನ್ನಿತರ ಪುನರ್ವಸತಿ ಕಾರ್ಯಕ್ರಮಗಳ ಬಗ್ಗೆ ಮಾಹಿತಿಗಳನ್ನು ಪಡೆಯಲು ಇಲಾಖೆಯ ನಿರ್ದೇಶನಾಲಯವನ್ನು ಸಂಪರ್ಕಿಸುತ್ತಿರುತ್ತಾರೆ. ಅಥವಾ ಮಾಹಿತಿಗಳನ್ನು ಎಲ್ಲಿಂದ ಪಡೆಯಲು ತಿಳಿಯದೇ ಅನೇಕ ಬಾರಿ ಯೋಜನೆಗಳ ಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ. ಹಲವಾರು ಬಾರಿ ಇಲಾಖೆಗೆ ವಿವಿಧ ಸ್ಥಳಗಳಲ್ಲಿರುವ ಅಂಗವಿಕಲರಿಂದ ದೂರು, ಮಾಹಿತಿ ಕೋರಿ ಮನವಿ ಪತ್ರಗಳು ಇಲಾಖೆಯಲ್ಲಿ ಸ್ವೀಕೃತಗೊಳ್ಳುವುದಲ್ಲದೆ ಸನ್ಮಾನ್ಯ ಮುಖ್ಯಮಂತ್ರಿಯವರ ಜನತಾ ದರ್ಶನದಲ್ಲೂ ಸಹ ಮನವಿ/ಬೇಡಿಕೆಗಳನ್ನು ಹೆಚ್ಚಿನ ಸಂಖ್ಯೆಗಳಲ್ಲಿ ಸಲ್ಲಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಈ ರೀತಿ ಸ್ವೀಕೃತವಾಗುವ ಹೆಚ್ಚಿನ ಮನವಿ/ದೂರುಗಳಲ್ಲಿ ಇಲಾಖೆಯ ಶೈಕ್ಷಣಿಕ ಸೌಲಭ್ಯ, ವೃತ್ತಿ ತರಬೇತಿ, ಉದ್ಯೋಗ ಮಾಹಿತಿ, ಸಾಮಾಜಿಕ ಭದ್ರತೆ ಹಾಗೂ ಪುನರ್ವಸತಿ ಸೇವೆ ಕುರಿತು ಇಲಾಖೆಯ ಯೋಜನೆಗಳು ಹಾಗೂ ಕೇಂದ್ರ ಸರ್ಕಾರದ ಯೋಜನೆಗಳ ಸೌಲಭ್ಯಗಳ ಬಗ್ಗೆ ಮಾಹಿತಿ ಕೋರಿರುವುದನ್ನು ಗಮನಿಸಲಾಗಿರುತ್ತದೆ. ಅಲ್ಲದೆ ಅಂಗವಿಕಲರಿಗೆ ಅತ್ಯವಶ್ಯಕವಾಗಿರುವಂತಹ ಸಾಧನ ಸಲಕರಣೆಗಳ ಲಭ್ಯತೆಯ

ಬಗ್ಗೆ ಮಾಹಿತಿ, ಅಂಗವಿಕಲರ ಪೋಷಕರಿಗೆ ಅವರ ಮಕ್ಕಳ ಮುಂದಿನ ಬೆಳವಣಿಗೆ ಕುರಿತು ಮಾಹಿತಿ ಹಾಗೂ ಯೋಜನಾ ಸೌಲಭ್ಯಗಳನ್ನು ಪಡೆಯುವ ಬಗ್ಗೆ ಇರುವ ನಿಯಮ ಹಾಗೂ ಅನುಸರಿಸಬೇಕಾದ ವಿಧಾನಗಳ ಬಗ್ಗೆ ಮಾಹಿತಿ ಹಾಗೂ ಅವುಗಳ ಮಂಜೂರಾತಿ ಪ್ರಾಧಿಕಾರ ಕುರಿತಂತೆ ಮಾಹಿತಿಗಳನ್ನು, ಅರ್ಜಿ ನಮೂನೆಗಳನ್ನು, ನೆರವು ನೀಡುವಂತಹ ಸ್ವಯಂ ಸೇವಾ ಸಂಸ್ಥೆ, ಇತರೆ ಇಲಾಖೆಗಳ ಮಾಹಿತಿಗಳ ಕುರಿತು ಹಲವಾರು ಮನವಿಗಳು ಸ್ವೀಕೃತವಾಗುತ್ತಿರುತ್ತದೆ. ಅಂಗವಿಕಲರು ಸಮಾಜದಲ್ಲಿ ಎದುರಿಸುವಂತಹ ಸಮಸ್ಯೆಗಳು ದೌರ್ಜನ್ಯಕ್ಕೊಳಗಾದವರು, ಅಂಗವಿಕಲರ ಹಕ್ಕುಗಳ ಚ್ಯುತಿಗೊಳಗಾದವರು ಪರಿಹಾರ ಪಡೆಯುವ ಬಗ್ಗೆ ಮಾಹಿತಿಗಳನ್ನು ಸಹ ಒದಗಿಸಬೇಕಾಗುತ್ತದೆ. ಈ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ವಿಕಲಚೇತನರಿಗೆ ಮಾಹಿತಿಗಳನ್ನು ಒದಗಿಸುವುದು ಅಗತ್ಯವಾಗಿರುತ್ತದೆ.

ಅಂಗವಿಕಲರಿಗೆ ಅವಶ್ಯಕವಾದ ಕೇವಲ ಮಾಹಿತಿಯಗಳನ್ನು ಒದಗಿಸುವುದಲ್ಲದೆ ಕಛೇರಿಗಳಿಗೆ ಭೇಟಿಯಾಗುವಂತಹ ಅಂಗವಿಕಲರಿಗೆ ಅವರ ಸಾಮರ್ಥ್ಯವನ್ನು ಗುರುತಿಸಿ ಅದಕ್ಕನುಗುಣವಾಗಿ ಸಲಹೆ ಮಾರ್ಗದರ್ಶನ ನೀಡುವುದು ಸಹ ಅಗತ್ಯವಾಗಿರುತ್ತದೆ. ಪ್ರಸ್ತುತ ಇಲಾಖೆಯ ಕೇಂದ್ರ ಕಛೇರಿಯಲ್ಲಿ ಮಾಹಿತಿ ಸಲಹಾ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯದ ವಿವಿಧ ಸ್ಥಳಗಳಿಂದ ಮಾಹಿತಿಗಾಗಿ ಕೇಂದ್ರ ಕಛೇರಿಗೆ ಅಂಗವಿಕಲರು ಬರುತ್ತಿದ್ದು, ಈ ನಿಟ್ಟಿನಲ್ಲಿ ಅಂಗವಿಕಲರಿಗೆ ಆದಷ್ಟು ಅವರ ಹತ್ತಿರದ ಸ್ಥಳಗಳಲ್ಲಿ ಮಾಹಿತಿ ದೊರಕುವಂತೆ ಅನುಕೂಲ ಕಲ್ಪಿಸಲು ಜಿಲ್ಲಾ ಕೇಂದ್ರಗಳಲ್ಲಿ ಮಾಹಿತಿ, ಸಲಹಾ ಕೇಂದ್ರಗಳನ್ನು ಸ್ಥಾಪಿಸುವಂತೆ ಸರ್ಕಾರವು ನಿರ್ಧರಿಸಿದ್ದು, ಅದರಂತೆ ಯೋಜನೆಯನ್ನು ರೂಪಿಸಲಾಗಿದೆ.

**ಯೋಜನೆಯ ಉದ್ದೇಶ ಮತ್ತು ಗುರಿ:**

- ರಾಜ್ಯದಲ್ಲಿ ವಿವಿಧ ಸ್ಥಳಗಳಲ್ಲಿ ವಾಸಿಸುತ್ತಿರುವ ಅಂಗವಿಕಲರಿಗೆ ಇಲಾಖೆಯ ಯೋಜನೆಯಡಿಯಲ್ಲಿ ದೊರೆಯುವ ಸೌಲಭ್ಯಗಳು ಹಾಗೂ ಪುನರ್ವಸತಿ ಸೇವೆಗಳ ಬಗ್ಗೆ ಮಾಹಿತಿ ಒದಗಿಸುವುದು.
- ಗ್ರಾಮೀಣ ಪ್ರದೇಶದ ಅಂಗವಿಕಲರಿಗೆ ಇಲಾಖೆಯಡಿಯ ಶೈಕ್ಷಣಿಕ ಸೌಲಭ್ಯ, ವೃತ್ತಿ ತರಬೇತಿ, ಉದ್ಯೋಗ ಮಾಹಿತಿ, ಸಾಮಾಜಿಕ ಭದ್ರತೆ ಕುರಿತು ಮಾಹಿತಿ ಒದಗಿಸುವುದು.
- ಅಂಗವಿಕಲರ ಮಕ್ಕಳ ಪೋಷಕರಿಗೆ ಸಲಹೆ, ಮಾರ್ಗದರ್ಶನ ಒದಗಿಸುವುದು.
- ಅಂಗವಿಕಲರಿಗೆ ಇಲಾಖೆಯ ಯೋಜನೆಗಳ ಸೌಲಭ್ಯ ಪಡೆಯುವ ವಿಧಾನ, ನಿಯಮ ಹಾಗೂ ಅರ್ಜಿ ನಮೂನೆಗಳ ಲಭ್ಯತೆಯ ಬಗ್ಗೆ ಮಾಹಿತಿ ಒದಗಿಸುವುದು.
- ವಿವಿಧ ಇಲಾಖೆ, ಸ್ವಯಂ ಸೇವಾ ಸಂಸ್ಥೆಗಳಲ್ಲಿ ಅಂಗವಿಕಲರಿಗೆ ದೊರೆಯುವ ಆರ್ಥಿಕ ನೆರವಿನ ಬಗ್ಗೆ ಮಾಹಿತಿ ಒದಗಿಸುವುದಲ್ಲದೆ ಅವರಿಗೆ ಈ ಸೇವಾ ಸೌಲಭ್ಯಗಳು ದೊರಕುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
- ರಾಜ್ಯದಲ್ಲಿನ ಅಂಗವಿಕಲರಿಗೆ ಅವರ ಹಕ್ಕುಗಳ ಸಂರಕ್ಷಣೆ ಹಾಗೂ ಅವರು ಸಮಾಜದ ಮುಖ್ಯವಾಹಿನಿಗೆ ಪೂರ್ಣ ಭಾಗವಹಿಸುವ ಬಗ್ಗೆ ಮಾರ್ಗದರ್ಶನ ನೀಡಿ ಅವರನ್ನು ಸಾಮಾನ್ಯರಂತೆ ಸಮುದಾಯದಲ್ಲಿ ಪಾಲ್ಗೊಳ್ಳಲು ನೆರವಾಗುವುದು.
- ಪ್ರತಿ ಮಾಹೆಗೊಮ್ಮೆ ಅಂಗವಿಕಲರಿಗಾಗಿ ವಿವಿಧ ಇಲಾಖೆಯ ಸ್ವಯಂ ಸೇವಾ ಸಂಸ್ಥೆಗಳ ಪದಾಧಿಕಾರಿಗಳ ಮೂಲಕ ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವುದು.

..3

## ಮಾಹಿತಿ ಸಲಹಾ ಕೇಂದ್ರ/ಸಹಾಯವಾಣಿಯ ಪ್ರಮುಖ ಕಾರ್ಯ ಚಟುವಟಿಕೆಗಳು:

1) ರಾಜ್ಯದಲ್ಲಿರುವ ಎಲ್ಲಾ ಶೈಕ್ಷಣಿಕ ಹಾಗೂ ವೃತ್ತಿ ತರಬೇತಿ ಸಂಸ್ಥೆಗಳ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸುವುದು ಹಾಗೂ ಅಗತ್ಯವಿರುವವರಿಗೆ ಒದಗಿಸುವುದು.
2) ದೇಶದಲ್ಲಿ ಇರುವ ನಾಲ್ಕು ರಾಷ್ಟ್ರೀಯ ಸಂಸ್ಥೆಗಳು, ಶಿಕ್ಷಕರ ತರಬೇತಿಯನ್ನು ಒಳಗೊಂಡಂತೆ ನೀಡುವ ತರಬೇತಿ ಕಾರ್ಯಕ್ರಮಗಳು ಹಾಗೂ ಇತರೆ ರಾಷ್ಟ್ರೀಯ ಸಂಸ್ಥೆಗಳು ಅಂಗವಿಕಲರಿಗಾಗಿ ನೀಡುವ ತರಬೇತಿ ಹಾಗೂ ಪುನರ್ವಸತಿ ಸೇವೆಗಳನ್ನು ಕುರಿತು ಮಾಹಿತಿ ಸಂಗ್ರಹಿಸುವುದು ಹಾಗೂ ಒದಗಿಸುವುದು.
3) ಅಂವಿಕಲರಿಗೆ ಅವಶ್ಯಕವಿರುವ ಎಲ್ಲಾ ತರಹದ ಮಾಹಿತಿ, ಅರ್ಜಿ ನಮೂನೆಗಳು ಇತ್ಯಾದಿಗಳನ್ನು ಒದಗಿಸುವುದು.
4) ಅಂಗವಿಕಲರ ಪುನರ್ವಸತಿಗೆ ಸಂಬಂಧಿಸಿದಂತೆ ಅಗತ್ಯವಿರುವ ಉತ್ತಮ ಗುಣಮಟ್ಟದ ಸಾಧನ–ಸಲಕರಣೆಗಳನ್ನು ತಯಾರಿಸುವ ಕಂಪನಿಗಳ ಬಗ್ಗೆ ಮಾಹಿತಿಗಳನ್ನು ಪಡೆದು, ಅಂಗವಿಕಲರಿಗೆ ಒದಗಿಸುವುದು.
5) ಉದ್ಯೋಗದ ಅವಕಾಶ ಹಾಗೂ ತರಬೇತಿ ಕುರಿತು ಸಮಾಲೋಚನಾ ಸೇವೆಗಳನ್ನು ಒದಗಿಸುವುದು.
6) ಸರ್ಕಾರಿ ಇಲಾಖೆಗಳು, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಹಾಗೂ ಕಂಪನಿಗಳನ್ನು ಸಂಪರ್ಕಿಸಿ, ಅಂಗವಿಕಲರಿಗೆ ಇರುವ ಉದ್ಯೋಗದ ಅವಕಾಶದ ಬಗ್ಗೆ ಮಾಹಿತಿಗಳನ್ನು ಕ್ರೋಢೀಕರಿಸಿ ಪ್ರಚುರಪಡಿಸುವುದು.
7) ಬ್ಯಾಂಕುಗಳು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹಾಗೂ ಇತರೆ ಹಣಕಾಸು ಸಂಸ್ಥೆಗಳೊಡನೆ ಸಂಪರ್ಕ ಹೊಂದಿ ಅಂಗವಿಕಲರ ಆರ್ಥಿಕ ಪುನರ್ವಸತಿಗೆ ಸಂಬಂಧಿಸಿದಂತೆ ಸೌಲಭ್ಯಗಳನ್ನು ಒದಗಿಸಿಕೊಡುವುದು.
8) ಅಂಗವಿಕಲರಿಗಾಗಿ ಸರ್ಕಾರವು ಹಮ್ಮಿಕೊಂಡಿರುವ ಯೋಜನೆಗಳಡಿಯಲ್ಲಿ ಅವರಿಗೆ ದೊರೆಯಬಹುದಾದ ಸೌಲಭ್ಯ, ಪುನರ್ವಸತಿ ಮತ್ತು ಅವರುಗಳ ಪ್ರಯೋಜನ ಪಡೆಯಲು ಅವಕಾಶ ಕಲ್ಪಿಸುವುದು.
9) ತೊಂದರೆಗೆ ಮತ್ತು ದೌರ್ಜನ್ಯಕ್ಕೆ ಒಳಪಟ್ಟಂತಹ ಅಂಗವಿಕಲರಿಗೆ ಸೂಕ್ತ ಸೇವಾ ಸೌಲಭ್ಯ ಲಭ್ಯವಿರುವ ಬಗ್ಗೆ ಮಾಹಿತಿಯನ್ನು ನೀಡುವುದು.
10) ಮಾಹಿತಿ ಕೋರಿ ಬಂದ ಅಂಗವಿಕಲ ವ್ಯಕ್ತಿಗಳ ಹಾಗೂ ಅವರು ಕೋರಿರುವ ಸೌಲಭ್ಯಗಳ ಮಾಹಿತಿಯನ್ನು ಸಂಗ್ರಹಿಸಿ ಕ್ರೋಢೀಕರಿಸುವುದು ಹಾಗೂ ನಿರ್ವಹಿಸುವುದು.

## ಯೋಜನೆ ಅನುಷ್ಠಾನ:

1. ಅಂಗವಿಕಲರ ಮಾಹಿತಿ ಸಲಹಾ ಕೇಂದ್ರವನ್ನು ಪ್ರತಿ ಜಿಲ್ಲೆಯ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಯ ಆವರಣದಲ್ಲಿ ಸ್ಥಾಪಿಸಲಾಗುವುದು. ಜಿಲ್ಲಾ ಕಛೇರಿಗಳಲ್ಲಿ ಸ್ಥಳಾವಕಾಶ ಲಭ್ಯವಿಲ್ಲದಿದ್ದಲ್ಲಿ ಕಛೇರಿಯ ಸಮೀಪದಲ್ಲಿ ಬಾಡಿಗೆ ಕಟ್ಟಡವನ್ನು ಗುರುತಿಸಿ ಸ್ಥಾಪಿಸಲಾಗುವುದು. ಈ ಕೇಂದ್ರಕ್ಕೆ ಬಾಡಿಗೆ ಕಟ್ಟಡದ ಅಗತ್ಯವಿದ್ದಲ್ಲಿ ಕಟ್ಟಡವನ್ನು ಗುರುತಿಸಿ ಬಾಡಿಗೆ ಕಾರಾರು ಪತ್ರದೊಂದಿಗೆ ಪ್ರಸ್ತಾವನೆಯನ್ನು ಇಲಾಖೆಗೆ ಸಲ್ಲಿಸಿ ಅನುಮೋದನೆಯನ್ನು ಪಡೆಯತಕ್ಕದ್ದು.

2. ಈ ಕೇಂದ್ರಗಳಲ್ಲಿ ಮಾಹಿತಿ ಹಾಗೂ ಸಲಹೆ /ಮಾರ್ಗದರ್ಶನ ನೀಡಲು ನುರಿತ ಅಂಗವಿಕಲರ ಕ್ಷೇತ್ರದಲ್ಲಿ ಕನಿಷ್ಠ 2 ವರ್ಷ ಅನುಭವ ಹೊಂದಿರುವ ಪದವೀಧರ ಅಭ್ಯರ್ಥಿಗಳನ್ನು ಸಲಹೆಗಾರರನ್ನಾಗಿ ನೇಮಿಸಿ ಸೇವೆ ಪಡೆಯಲು ಹಾಗೂ ಕಂಪ್ಯೂಟರ್ ಆಪರೇಟರ್ ಮತ್ತು ಗ್ರೂಪ್ ಡಿ ಸಿಬ್ಬಂದಿಗಳ ಸೇವೆಗಳನ್ನು ಬಾಹ್ಯಮೂಲದಿಂದ ಪಡೆಯಲಾಗುವುದು.
3. ಈ ಕೇಂದ್ರವು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸುತ್ತದೆ. ಕೇಂದ್ರಕ್ಕೆ ಅಗತ್ಯವಾಗಿರುವ ಪೀಠೋಪಕರಣ, ಗಣಕಯಂತ್ರ ಹಾಗೂ ಇತರೆ ಸಾಮಗ್ರಿಗಳನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಯೋಜನೆಯಲ್ಲಿ ತಿಳಿಸಿರುವಂತೆ ಪಾರದರ್ಶಕ ನಿಯಮಾನುಸಾರ ಖರೀದಿಸಿ ಒದಗಿಸುವುದು.
4. ಯೋಜನೆಯ ಅನುಷ್ಠಾನಕ್ಕಾಗಿ ಇಲಾಖೆಯಿಂದ ದೂರವಾಣಿಯನ್ನು ಒದಗಿಸಲಾಗುವುದು. ಪ್ರತಿ ಆರು ತಿಂಗಳಿಗೊಮ್ಮೆ ಕೇಂದ್ರದ ಚಟುವಟಿಕೆಗಳ ಬಗ್ಗೆ ತಪಾಸಣೆ ನಡೆಸಿ ಅಂಕಿ ಅಂಶಗಳೊಂದಿಗೆ ಸಂಪೂರ್ಣ ವರದಿಯನ್ನು ನಿರ್ದೇಶನಾಲಯಕ್ಕೆ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ತಪ್ಪದೇ ಸಲ್ಲಿಸುವುದು.
5. <u>ಸೇವೆ/ಸಲಹೆ ಪಡೆಯುವ ಬಗ್ಗೆ:</u>
    1. ವಿಕಲಚೇತನ ವ್ಯಕ್ತಿಗಳು, ಅಥವ ಅವರ ಪರವಾಗಿ ಪೋಷಕರು, ಪಾಲಕರು, ಸ್ವಯಂ ಸೇವಾ ಸಂಸ್ಥೆಗಳವರು ಕಛೇರಿಗೆ ಖುದ್ದಾಗಿ ಬಂದು ಮಾಹಿತಿ ಪಡೆಯಬಹುದಾಗಿರುತ್ತದೆ.
    2. ತುರ್ತು ಪರಿಸ್ಥಿತಿಯಲ್ಲಿ, ಖುದ್ದಾಗಿ ಬರಲು ಸಾಧ್ಯವಾಗದೇ ಇರುವ ಸಂಧರ್ಭಗಳಲ್ಲಿ ಸದರಿ ಯೋಜನೆಯಡಿ ಒದಗಿಸಲಾಗುವ ದೂರವಾಣಿ ಮೂಲಕ ಮಾಹಿತಿಯನ್ನು ಪಡೆಯಬಹುದು.

6. <u>ಮಾಹಿತಿ ಕೇಂದ್ರ/ಸಲಹಾ ಕೇಂದ್ರದ ಪ್ರಚಾರ:</u>

ಪ್ರಾರಂಭಿಕ ಹಂತದಲ್ಲಿ ಯೋಜನೆಯ ಕುರಿತು ವಿಆರ್‌ಡಬ್ಲ್ಯೂ, ಎಂಆರ್‌ಡಬ್ಲ್ಯೂ, ಅಂಗನವಾಡಿ ಕಾರ್ಯಕರ್ತೆಯರು, ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಮೂಲಕ ವ್ಯಾಪಕ ಪ್ರಚಾರ ನೀಡುವುದು. ಬ್ರೋಚರ್, ಕರಪತ್ರಗಳನ್ನು ಮುದ್ರಿಸಿ ವಿತರಿಸುವುದು, ದಿನಪತ್ರಿಕೆಗಳಲ್ಲಿ ಈ ಕುರಿತು ವ್ಯಾಪಕ ಪ್ರಚಾರ ನೀಡುವುದು. ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆಗಳಲ್ಲಿ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಹಾಗೂ ಉಪನಿರ್ದೇಶಕರು ಮಮಇ ಇವರ ಮೂಲಕ ತಿಳುವಳಿಕೆ ನೀಡುವುದು.

7. <u>ದಾಖಲೆಗಳ ನಿರ್ವಹಣೆ:</u>

1. ಸಿಬ್ಬಂದಿ ಹಾಜರಿ
2. ಮಾಹಿತಿ ಕೋರಿ ಬಂದ ವ್ಯಕ್ತಿಗಳ/ ಕರೆಗಳ ವಿವರಗಳನ್ನೊಂಳಗೊಂಡ ದಾಖಲೆ.
3. ಪ್ರತ್ಯೇಕ ಬ್ಯಾಂಕ್ ಖಾತೆ
4. ವೇತನ ಬಟವಾಡೆ ವಹಿ
5. ನಗದು ಪುಸ್ತಕ
6. ಜಡ ವಸ್ತುಗಳ ವಹಿ
7. ಅನುದಾನ ಸ್ವೀಕರಿಸಿದ ವಹಿ
8. ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಮಾಹಿತಿಯುಳ್ಳ ಕಡತ
9. ಸಾದಿಲ್ವಾರು ವಹಿ
10. ಮಾಹೆಯಾನ ಸಲ್ಲಿಸುವ ಪ್ರಗತಿ ವರದಿ (ನಮೂನೆಯನ್ನು ಅನುಬಂಧದಲ್ಲಿ ಲಗತ್ತಿಸಿದೆ)

..5

ಸಿಬ್ಬಂದಿ ತರಬೇತಿ:

ಯೋಜನೆಯಡಿ ಆಯ್ಕೆಯಾದ ಸಿಬ್ಬಂದಿಗಳಿಗೆ (ಸಲಹೆಗಾರರಿಗೆ) ನಿರ್ದೇಶನಾಲಯದಿಂದ ಎರಡು ದಿನಗಳ ತರಬೇತಿಯನ್ನು ನೀಡಲಾಗುವುದು.

## ಸಹಾಯವಾಣಿ/ಮಾಹಿತಿ ಸಲಹಾ ಕೇಂದ್ರದ ಸಿಬ್ಬಂದಿಗಳ ಕರ್ತವ್ಯಗಳು

### ಮಾಹಿತಿ ಸಲಹೆಗಾರರು.

- ಸಲಹಾ ಕೇಂದ್ರಕ್ಕೆ ಬರುವಂತಹ ಎಲ್ಲಾ ಅಂಗವಿಕಲರಿಗೆ ಅವಶ್ಯಕವಿರುವ ಮಾಹಿತಿ ಹಾಗೂ ಸಲಹೆಗಳನ್ನು ನೀಡುವುದು.
- ಮಾಹಿತಿ ಕೇಂದ್ರದಲ್ಲಿ ಮಾಹಿತಿ ನೀಡಲು ಅವಶ್ಯಕವಿರುವ ಇಲಾಖೆಯ ಯೋಜನೆಗಳ ಬಗ್ಗೆ ಮಾಹಿತಿ ಇರುವಂತಹ ಕೈಪಿಡಿ, ಚಾರ್ಟ್, ಬ್ರೋಚರ್ ಮತ್ತು ಕಿರುಹೊತ್ತಿಗೆ ಮುಂತಾದವುಗಳನ್ನು ನಿರ್ವಹಿಸುವುದು.
- ವಿವಿಧ ಇಲಾಖೆಗಳಿಂದ ವಿಕಲಚೇತನರಿಗೆ ಇರುವಂತಹ ದೊರಕುವಂತಹ ಯೋಜನೆಗಳ ಸೇವಾ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಪಡೆದು ಅಂಗವಿಕಲರಿಗೆ ಮಾಹಿತಿಯನ್ನು ಕೇಂದ್ರದಲ್ಲಿ ಒದಗಿಸುವುದು.
- ಅಂಗವಿಕಲರಿಗೆ ಹಾಗೂ ಅವರ ಪೋಷಕರಿಗೆ ಶೈಕ್ಷಣಿಕ, ಔದ್ಯೋಗಿಕ, ಸಾಮಾಜಿಕ ಭದ್ರತೆ ಮತ್ತು ಎಲ್ಲಾ ಪುನರ್ವಸತಿ ಸೇವೆಗಳ ಬಗ್ಗೆ ಮಾಹಿತಿ, ಸಲಹೆ ಹಾಗೂ ಸೂಕ್ತ ಮಾರ್ಗದರ್ಶನಗಳನ್ನು ನೀಡುವುದು.
- ಪ್ರತಿ ತಿಂಗಳಿಗೊಮ್ಮೆ ವಿಕಲಚೇತನರಿಗಾಗಿ ಸೇವೆಗಳನ್ನು ನೀಡುತ್ತಿರುವ ವಿವಿಧ ಇಲಾಖೆಗಳ/ ಸ್ವಯಂಸೇವಾ ಸಂಸ್ಥೆಗಳ ಪದಾಧಿಕಾರಿಗಳ ಸಮಾಲೋಚನಾ ಸಭೆಯನ್ನು ನಡೆಸುವುದು ಹಾಗೂ ಈ ಕುರಿತಂತೆ ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸುವುದು.
- ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು, ವಿವಿದ್ದೋದ್ದೇಶ ಪುನರ್ವತಿ ಕಾರ್ಯಕರ್ತರು, ಅಂಗನವಾಗಿ ಕಾರ್ಯಕರ್ತೆಯರ, ಮೇಲ್ವಿಚಾರಕಿಯರ ಹಾಗೂ ಆರೋಗ್ಯ ಮತ್ತು ಶಿಕ್ಷಣ ಇಲಾಖೆಯ ಕಾರ್ಯಕರ್ತರ ಸಭೆಗಳಲ್ಲಿ ಭಾಗವಹಿಸಿ ಯೋಜನೆಯ ಬಗ್ಗೆ ವ್ಯಾಪಕ ಪ್ರಚಾರ ನೀಡುವುದು.
- ಮಾಹಿತಿ ಕೋರಿ ಬಂದ ಅಂಗವಿಕಲ ವ್ಯಕ್ತಿಗಳ ಹಾಗೂ ಅವರು ಕೋರಿರುವ ಸೌಲಭ್ಯಗಳ ಸಂಪೂರ್ಣ ಮಾಹಿತಿಯನ್ನು ಸಂಗ್ರಹಿಸಿ ವಹಿಯಲ್ಲಿ ಕ್ರೋಢೀಕರಿಸುವುದು ಹಾಗೂ ಸಮರ್ಪಕವಾಗಿ ನಿರ್ವಹಿಸುವುದು.
- ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು, ವಿವಿದ್ದೋದ್ದೇಶ ಪುನರ್ವತಿ ಕಾರ್ಯಕರ್ತರು, ರಾಜ್ಯ/ಜಿಲ್ಲಾ ಸಂಯೋಜಕರೊಂದಿಗೆ ಸಮನ್ವಯತೆ ಸಾಧಿಸಿ ಕರ್ತವ್ಯ ನಿರ್ವಹಿಸುವುದು, ಜಿಲ್ಲಾ ಅಂಗವಿಕಲರ ಪುನರ್ವಸತಿ ಕೇಂದ್ರಗಳು ಇವರು ಜಿಲ್ಲೆಗಳ ಸಂಯೋಜಕರೊಂದಿಗೆ ಸಮನ್ವಯತೆ ಸಾಧಿಸುವುದು.
- ಯೋಜನೆಗೆ ಸಂಬಂಧ ಪಟ್ಟ ದಾಖಲೆಗಳ ನಿರ್ವಹಣೆ

### ಕಂಪ್ಯೂಟರ್ ಆಪರೇಟರ್

- ಕೇಂದ್ರದ ದಾಖಲೆಗಳ ಹಾಗೂ ಕಡತಗಳ ನಿರ್ವಹಣೆ ಹಾಗೂ ಮಾಹಿತಿಗಳನ್ನು ಗಣಕೀಕರಣಗೊಳಿಸುವುದು ಹಾಗೂ ವಹಿಗಳನ್ನು ನಿರ್ವಹಿಸುವುದು.
- 

### 10. ಕಛೇರಿ ಸೇವಕ

- ಗ್ರೂಪ್ 'ಡಿ' ಕೆಲಸಗಳ ನಿರ್ವಹಣೆ

ಪ್ರತಿ ವಿಕಲಚೇತನರ ಮಾಹಿತಿ/ಸಲಹಾ ಕೇಂದ್ರದ ನಿರ್ವಹಣೆಗೆ ತಗಲುವ ವೆಚ್ಚದ ವಿವರಗಳು:

| ಕ್ರ ಸಂ. | ವಿವರ | ಸಂಖ್ಯೆ | ವಿದ್ಯಾರ್ಹತೆ | ಮಾಹೆಯಾನ ಮೊತ್ತ ರೂ.*ತಿಂ*ಸಂ | ಒಟ್ಟು ಮೊತ್ತ ರೂ. |
|---|---|---|---|---|---|
| I | **ಆವರ್ತಕ ವೆಚ್ಚ:** | | | | |
| 1 | ಮಾಹಿತಿ ಸಲಹಾಗಾರರು | 02 | ಯಾವುದೇ ಪದವೀಧರರು | 10000*12*2 | 2,40,000/– |
| 2 | ಕಂಪ್ಯೂಟರ್ ಆಪರೇಟರ್ | 01 | ಪಿಯುಸಿ ಹಾಗೂ ಕಂಪ್ಯೂಟರ್‌ನಲ್ಲಿ ಬೇಸಿಕ್ | 9000*12*1 | 1,08,000/– |
| 3 | ಕಛೇರಿ ಸೇವಕರು | 01 | 7ನೇ ತರಗತಿ | 6000*12*1 | 72,000/– |
| 4 | ಸಾದಿಲ್ವಾರು ವೆಚ್ಚ (ದೂರವಾಣಿ, ವಿದ್ಯುತ್ ಇತರೆ) | – | – | – | 30,000/– |
| 5 | ಲೇಖನ ಸಾಮಗ್ರಿ ಮತ್ತು ಪ್ರಚಾರ | – | – | – | 25,000/– |
| 6 | ಕಟ್ಟಡ ಬಾಡಿಗೆ | – | – | 8000*12 | 96,000/– |
| | | | | ಒಟ್ಟು ರೂ. | **5,71,000/–** |
| II | **ಅನಾವರ್ತಕ ವೆಚ್ಚ:** | | | | |
| 1 | ಕಂಪ್ಯೂಟರ್, ಪ್ರಿಂಟರ್ ಮತ್ತು ಯುಪಿಎಸ್ | 1+1+1 | – | | 1,00,000/– |
| 2 | ಪೀಠೋಪಕರಣಗಳು (ಸಲಹೆಗಾರರು ಹಾಗೂ ಕಂಪ್ಯೂಟರ್ ಆಪರೇಟರ್ ಇವರಿಗೆ ಟೇಬಲ್ ಮತ್ತು ಕುರ್ಚಿ, ಅಲ್ಮೇರ–2, ಸಂದರ್ಶಕರಿಗೆ 4 ಕುರ್ಚಿ) | – | – | | 44,000/– |
| | | | | ಒಟ್ಟು ರೂ. | **1,44.000/–** |
| | **ಒಟ್ಟು ರೂ. (I + II)** | | **5,71,000/– + 1,44,000/–** | | **7,15,000/–** |

(ಜಯಲಕ್ಷ್ಮಿ) 25/6/15

ಸರ್ಕಾರದ ಅಧೀನ ಕಾರ್ಯದರ್ಶಿ–2,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ